ಅವುಗಳ ನಿರ್ವಹಣೆ ವೆಚ್ಚವು ಹೆಚ್ಚಾಗುವುದರಿಂದ ನಿಷ್ಪ್ರಯೋಜಕವೆಂದು, ಘೋಷಿಸಲಾಗಿದೆ. ಅವುಗಳ ವಿವರಗಳು ಈ ಕೆಳಕಂಡಂತೆ ಇವೆ :—

| | | | |
|---|---|---|---|
| ೧) | ನ್ಯಾಷನಲ್ ಮಲೇರಿಯಾ ನಿವಾರಣೆ ಕಾರ್ಯಕ್ರಮದಡಿಯಲ್ಲಿ ಭಾರತ ಸರ್ಕಾರದಿಂದ ಕೊಟ್ಟಿದ್ದ ವಾಹನಗಳು | ... | ೩ |
| ೨) | ಕುಟುಂಬ ಕಲ್ಯಾಣ ಕಾರ್ಯಕ್ರಮದಡಿಯಲ್ಲಿ ಭಾರತ ಸರ್ಕಾರದಿಂದ ಕೊಟ್ಟಿದ್ದ ವಾಹನಗಳು | ... | ೬ |
| ೩) | ಯೂನಿಸೆಫ್ ಸಂಸ್ಥೆಯಿಂದ ಕೊಟ್ಟಿದ್ದ ವಾಹನ | ... | ೧ |
| ೪) | ರಾಜ್ಯ ಸರ್ಕಾರಕ್ಕೆ ಸೇರಿದ ವಾಹನಗಳು | ... | ೨ |
| | | | ೧೨ |

೧೨ ವಾಹನಗಳ ವಿಲೇವಾರಿಗೆ ಸೂಕ್ತ ಕ್ರಮ ತೆಗೆದುಕೊಳ್ಳಲಾಗಿದೆ ಮತ್ತು ವಿಲೇವಾರಿಯು ಕಾರ್ಯಕ್ರಮವು ವಿವಿಧ ಹಂತದಲ್ಲಿದೆ.

ಈ ಮೇಲ್ಕಂಡ ವಾಹನಗಳು ಅಲ್ಲದೆ ಇತರ ೫ ವಾಹನಗಳ ರಿಪೇರಿ ಮಾಡಿಸುವುದಕ್ಕಾಗಿ ನಿಲ್ಲಿಸಲಾಗಿದೆ. ಅವುಗಳ ರಿಪೇರಿಗಾಗಿ ಸೂಕ್ತ ಕ್ರಮ ತೆಗೆದುಕೊಳ್ಳಲಾಗಿದ್ದು, ರಿಪೇರಿಯ ನಂತರ ಅವುಗಳನ್ನು ಉಪಯೋಗಕ್ಕೆ ಬಿಡುಗಡೆ ಮಾಡಲಾಗುತ್ತದೆ.

ರಾಜ್ಯದ ಇತರ ಜಿಲ್ಲೆಗಳಲ್ಲಿ ೧೬೭ ವಾಹನಗಳು ನಿಷ್ಪ್ರಯೋಜಕವೆಂದು ಘೋಷಿಸಲಾಗಿದ್ದು, ಅವುಗಳ ವಿಲೇವಾರಿಯ ಬಗ್ಗೆ ಸಂಬಂಧಪಟ್ಟ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳು ಸೂಕ್ತ ಕ್ರಮ ತೆಗೆದುಕೊಳ್ಳುವರು.

## 4 ಶ್ರೀ ಕಾರ್ನಾಡ ಪ್ರಭಾಕರರಾಯರಿಗೆ ಗೌರವಧನ ನೀಡುವುದು.

ಶ್ರೀ ಎನ್. ಎಂ. ಆಡ್ಯಂತಾಯ.—ರಾಷ್ಟ್ರದ ಸ್ವಾತಂತ್ರ್ಯ ಸಂಗ್ರಾಮ ಕಾಲದಲ್ಲಿ ತನ್ನೆಲ್ಲ ಸುಖಭೋಗಗಳನ್ನು ತೊರೆದು ಮಹತ್ವದ ಪಾತ್ರ ವಹಿಸಿದ ದೇಶಭಕ್ತ ಕಾರ್ನಾಡ ಸದಾಶಿವರಾಯರು ರಾಜ್ಯದ ಇತಿಹಾಸದಲ್ಲಿ ಮಹತ್ವದ ಹೆಸರು ಪಡೆದಿರುವವರು. ಸನ್ಮಾನ್ಯ ಮುಖ್ಯ ಮಂತ್ರಿಗಳವರು ರಾಜ್ಯದ ಅನೇಕ ಪ್ರತಿಷ್ಠಿತರು ವಾಸ ಮಾಡುವ ಬಡಾವಣೆಗೆ "ಸದಾಶಿವ ನಗರ" ವೆಂದು ಕಾರ್ನಾಡರ ಸ್ಮರಣೆಗಾಗಿ ಕರೆಯಲಾಗಿದೆ. ಇಂತಹ ದೇಶಭಕ್ತ ಕಾರ್ನಾಡ ಸದಾಶಿವರಾಯರ ಪುತ್ರ ಸ್ವಾತಂತ್ರ್ಯ ಹೋರಾಟದಲ್ಲಿ ಸಕ್ರೀಯ ಪಾತ್ರವಹಿಸಿದ ಕಾರ್ನಾಡ ಪ್ರಭಾಕರರಾಯರು ಸ್ವಾತಂತ್ರ್ಯದ ನಂತರ ಹಿಂದಿ ಚಿತ್ರರಂಗದಲ್ಲಿ ಅನೇಕ ಚಿತ್ರಗಳಲ್ಲಿ ಕಲಾವಿದರಾಗಿ, ನಿರ್ಮಾಣ ಸಹಾಯಕರಾಗಿ ದುಡಿದಿದ್ದಾರೆ. ಇಂತಹ ದೇಶಪ್ರೇಮಿಯರು ಬೆಂಗಳೂರಿನ ಗಾಂಧಿಭವನದ ಬಳಿಯ ವೃದ್ಧಾಶ್ರಮದಲ್ಲಿ ತಮ್ಮ ಜೀವನವನ್ನು ಕಳೆಯುತ್ತಿರುವುದು ಇಡೀ ರಾಜ್ಯಕ್ಕೆ ಆದ ಅವಮಾನ. ಆದ್ದರಿಂದ ತತ್‌ಕ್ಷಣ ಕಾರ್ನಾಡ ಪ್ರಭಾಕರ ರಾಯರಿಗೆ ಸರ್ಕಾರದ ಗೌರವಧನ ಮತ್ತು ವಸತಿ ಸೌಕರ್ಯ ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ಮಾನ್ಯ ಸದಸ್ಯರು ಹೇಳಿದ, ವ್ಯಕ್ತಮಾಡಿದ ಭಾವನೆಗಳನ್ನು ಸರಕಾರ ಗಂಭೀರವಾಗಿ ಆಲೋಚನೆ ಮಾಡಬೇಕು. ಆದಷ್ಟು ಜಾಗ್ರತೆ, ಮಾನ್ಯರು ಹೇಳಿದ ವಿಚಾರಗಳ ಬಗ್ಗೆ ಕ್ರಮಗೊಳ್ಳುತ್ತೇವೆ.

## 5, ಮಂಗಳೂರು ವಿಭಾಗದಲ್ಲಿ ಕೆಟ್ಟಿರುವ ಕೊಳವೆ ಬಾವಿಗಳ ರಿಪೇರಿ ಹಾಗೂ ಹೊಸ ಕೊಳವೆ ಬಾವಿಗಳನ್ನು ಕೊರೆಯುವುದು

ಶ್ರೀ ಕೆ. ಕಂಶಾಲ.— ದಕ್ಷಿಣ ಕನ್ನಡ ಜಿಲ್ಲೆಯ ಮಂಗಳೂರು ವಿಭಾಗದಲ್ಲಿ ಕಳೆದೆರಡು ತಿಂಗಳಿಂಗಳಿಂದ ಕೆಟ್ಟುಹೋದ ಕೊಳವೆ ಬಾವಿಗಳ ರಿಪೇರಿ, ಮತ್ತು ಮಂಜೂರಾದ ಕೊಳವೆಬಾವಿಗಳನ್ನು

ಕೊರೆಯುವ ಕೆಲಸ ನಡೆಯುತ್ತಿಲ್ಲ. ಪಿ.ಎಲ್.ಇ. ಇಲಾಖೆಯಂವರನ್ನು ವಿಚಾರಿಸಿದಾಗ ಸರಕಾರದಿಂದ ಎಸ್.ಓ.ಸಿ. ಬಂದಿಲ್ಲ, ಮಂಗಳೂರು ವಿಭಾಗದಲ್ಲಿ ಕೊಳವೆ ಬಾವಿ ಕಂಟ್ರಾಕ್ಟ್‌ದಾರರಿಗೆ ಸುಮಾರು ೪೫ ಲಕ್ಷ ರೂಪಾಯಿಗಳ ಹಣ ಪಾವತಿ ಆಗಿಲ್ಲ ಎಂದು ತಿಳಿದು ಬರುತ್ತದೆ. ಇದು ನಿಜವೆ ? ಒಬ್ಬೊಬ್ಬ ಕಂಟ್ರಾಕ್ಟ್‌ದಾರರು, ಡಿಸೇಲ್‌ಬಿಲ್ಲು ತಲಾ ಒಂದೊಂದು ಲಕ್ಷ ಪಾವತಿ ಮಾಡಲು ಪೆಟ್ರೋಲು ಪಂಪುಗಳಲ್ಲಿ ಬಾಕಿ ಇರುವುದರಿಂದ ಕೆಲಸ ಎರಡು ತಿಂಗಳುಗಳಿಂದ ಸ್ಥಗಿತಗೊಂಡಿದೆ ಎಂದು ತಿಳಿಸುತ್ತಾರೆ. ಸುಳ್ಯ ವಿಧಾನ ಸಭಾ ಕ್ಷೇತ್ರದ ಸುಳ್ಯ ತಾಲ್ಲೂಕಿನಲ್ಲಿ ೩೫ ಕೊಳವೆ ಬಾವಿಗಳು ಮಂತ್ತು ಪುತ್ತೂರು ತಾಲ್ಲೂಕಿನ ಭಾಗದಲ್ಲಿ ೧೫ ಕೊಳವೆ ಬಾವಿಗಳು ಕೊರೆಯಲು ಬಾಕಿ ಇದ್ದು ರಿಪೇರಿ ಕೆಲಸ ಕೂಡ ಬಾಕಿ ಇರುವುದರಿಂದ ಸಾರ್ವಜನಿಕರಿಗೆ ಕುಡಿಯುವ ನೀರಿನ ಅಭಾವ ಉಂಟಾಗಿದೆ. ಆದುದರಿಂದ ಕೊಳವೆ ಬಾವಿಗಳ ರಿಪೇರಿ ಹಾಗೂ, ಕೊರೆಯಂವ ಕೆಲಸವನ್ನು ಕೂಡಲೇ ಕೈಗೆತ್ತಿಕೊಂಡು, ಕುಡಿಯುವ ನೀರಿನ ಸವಂಸ್ಯೆಗಳನ್ನು ನೀಗಿಸುವಂತೆ ಈ ಮೂಲಕ ಒತ್ತಾಯಿಸುತ್ತೇನೆ.

**ಶ್ರೀ ಎಸ್. ಆರ್. ಬೊಮ್ಮಾಯಿ.–ಮಾನ್ಯ ಸದಸ್ಯರು ಹೇಳಿದ ವಿಚಾರಗಳನ್ನು ಆರ್.ಡಿ.ಪಿ.ಆರ್ ಮಂತ್ರಿಗಳವರ ಗಮನಕ್ಕೆ ತರುತ್ತೇನೆ.**

## 6. ಬೆಂಗಳೂರು ಮಹಾನಗರ ಪಾಲಿಕೆಯ ಅಧಿಕಾರಿಗಳು ಚುನಾಯಿತ ಪ್ರತಿನಿಧಿಗಳ ಮೇಲೆ ನಡೆಸಿರುವ ದೌರ್ಜನ್ಯ ಮತ್ತು ದಬ್ಬಾಳಿಕೆ

ಶ್ರೀಮತಿ. ಕೆ. ಎಸ್. ನಾಗರತ್ನಮ್ಮ.— ಬೆಂಗಳೂರು ಮಹಾ ನಗರಪಾಲಿಕೆಯ ಕೆಲವು ಅಧಿಕಾರಿಗಳು ಚುನಾಯಿತ ಪ್ರತಿನಿಧಿಗಳ ಮೇಲೆ ದೌರ್ಜನ್ಯ ಮತ್ತು ದಬ್ಬಾಳಿಕೆ ನಡೆಸಿದ್ದಾರೆ. ದಿನಾಂಕ ೩–೩–೧೯೮೭ ರಂದು ನಗರ ಪಾಲಿಕೆಯ ವಿರೋಧ ಪಕ್ಷದ ನಾಯಕರ ಅಧಿಕೃತ ಕಛೇರಿಗೆ ನುಗ್ಗಿ ಅಲ್ಲಿಯ ಸಾರ್ವಜನಿಕರನ್ನು ಓಡಿಸಿ ಬೀಗ ಮುದ್ರೆಯನ್ನು ಹಾಕಿರುವುದು. ದಿನಾಂಕ ೨೭–೨–೧೯೮೭ ರಂದು ಮಹಾ ನಗರಪಾಲಿಕೆ ಜನತಾ ಪಕ್ಷದ ಸದಸ್ಯರು ಸಭೆಯಲ್ಲಿ ನಿರ್ಣಯವನ್ನು ತಂದು ನಗರ ಪಾಲಿಕೆಯ ಪ್ರತಿಪಕ್ಷದ ನಾಯಕರಾಗಲು ಅರ್ಹತೆಯುಳ್ಳ ಸದಸ್ಯರ ಬೆಂಬಲವನ್ನು ಪಡೆದಿದ್ದಾಗ್ಯೂ, ನಿರ್ಣಯವನ್ನು ತಂದು ಎಲ್ಲಾ ಅರ್ಹತೆಯನ್ನು ಪಡೆದಿರುವ ವಿರೋಧ ಪಕ್ಷದ ನಾಯಕತ್ವವನ್ನು ಅನೂರ್ಜಿತಗೊಳಿಸಿರುವುದು ಸರಿಯಾದುದಲ್ಲ. ಇದರ ಬಗ್ಗೆ ನಗರಾಭಿವೃದ್ಧಿ ಸಚಿವರು ಸದನದಲ್ಲಿ ಉತ್ತರಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಎಸ್. ಆರ್. ಬೊಮ್ಮಾಯಿ.— ಮಾನ್ಯ ಅಧ್ಯಕ್ಷರೇ, ಮಾನ್ಯ ನಗರಾಭಿವೃದ್ಧಿ ಸಚಿವರ ಗಮನಕ್ಕೆ ವಿಷಯವನ್ನು ತಂದು ಸೂಕ್ತ ಕ್ರಮ ತೆಗೆದುಕೊಂಡ ಬಗ್ಗೆ ಮಾನ್ಯ ವಿರೋಧಪಕ್ಷದ ನಾಯಕಿಯವರಿಗೆ ತಿಳಿಸುವ ಏರ್ಪಾಡು ಮಾಡುತ್ತೇನೆ.

ಶ್ರೀಮತಿ ಕೆ ಎಸ್. ನಾಗರತ್ನಮ್ಮ.— ಅಧ್ಯಕ್ಷರೇ. ಇಷ್ಟು ಸುಲಭವಾಗಿ ಇದನ್ನು ನಿಭಾಲ್ ಮಾಡುವುದಕ್ಕಾಗುವುದಿಲ್ಲ, ಸಂಬಂಧಪಟ್ಟ ಮಂತ್ರಿಯವರು ಇಲ್ಲಿ ಈ ವಿಷಯಕ್ಕೆ ಉತ್ತರಿಸ ಬೇಕು. ಅವರ ಬದಲಾಗಿ ಮಾನ್ಯ ಕಂದಾಯ ಸಚಿವರು ತಿಳಿಸುತ್ತೇನೆ ಎಂದು ಹೇಳಿದರೆ ಹೇಗೆ ?

ಅಧ್ಯಕ್ಷರು.— ಮಾನ್ಯ ಸಚಿವರು ಕೌನ್ಸಿಲ್‌ನಲ್ಲಿ ಇದ್ದಾರೆ. ಅವರ ಪರವಾಗಿ ಮಾನ್ಯ ಕಂದಾಯ ಸಚಿವರು ನಿಮಗೆ ಉತ್ತರ ದೊರಕಿಸುವ ವಿಚಾರವನ್ನು ಹೇಳಿದ್ದಾರೆ. ೩೫ಳಿರ ಮಿತಿಯಲ್ಲಿ ಪ್ರಶ್ನೆ ಕೇಳುವುದಕ್ಕೆ ಅವಕಾಶ ಇಲ್ಲ. ಇಂತಹ ಒಂದು ಅವಕಾಶವನ್ನು ಎಲ್ಲರಿಗೂ ವಿಧಾನ ಸಭೆಯಲ್ಲಿ ಇಟ್ಟಿದ್ದೇವೆ. ಅದು ತಮಗೆ ತಿಳಿದಿದೆ.....

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.— ಇದು ಮುಖ್ಯವಾದಂತಹ ವಿಚಾರ. ಮಾನ್ಯ ಕಂದಾಯ ಸಚಿವರು ಕೂಡ ಉತ್ತರವನ್ನು ಇಲ್ಲಿ ಕೊಡಬಹುದು.

ಅಧ್ಯಕ್ಷರು.— ಹೀಗೆ ಮಾತನಾಡುವುದು ಸರಿಯಲ್ಲ.....

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.— ಅಲ್ಲಿ ಒಬ್ಬ ಚುನಾಯಿತ ಸದಸ್ಯರ ಗತಿ ಇದಾದರೆ ಬಹಳ ಕಷ್ಟವಾಗುತ್ತದೆ.

ಅಧ್ಯಕ್ಷರು.— ನಾಳೆ ತಾವುಗಳು ಭಾಷಣ ಮಾಡುವ ಸಂದರ್ಭದಲ್ಲಿ ಮಾತನಾಡಬಹುದು.